KABG510001312010

RAJEEV GOLASAR

Digitally signed by RAJEEV GOLASAR
Date: 2025.03.01 16:49:23 +0530

**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗೋಕಾಕ</u>**

:: ಉಪಸ್ಥಿತರು ::

**ರಾಜೀವ ಗೋಳಸಾರ,** ಬಿ.ಎ., ಎಲ್.ಎಲ್.ಎಂ.,
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ., ಗೋಕಾಕ.

**ದಿನಾಂಕ 27 ನೇ ಫೇಬ್ರವರಿ 2025**

**<u>ಅಸಲು ದಾವೆ ನಂ.637/2010</u>**

**ವಾದಿಯರುಃ** ಶ್ರೀಮತಿ ಲಕ್ಷ್ಮೀ ಬಸವರಾಜ ಕಡಕೋಳ
ವಯಾ 22 ವರ್ಷ, ವಾಸಃ ಒಕ್ಕಲುತನ ಮತ್ತು ಮನೆಗೆಲಸ
ಸಾಃ ಉಪ್ಪಾರಟ್ಟಿ, ಪ್ರಸುತ್ತ ದುರದುಂಡಿ, ತಾಃ ಗೋಕಾಕ
ಹಾಗು ಇನ್ನೊಬ್ಬರು

**(ಶ್ರೀ ಎಂ ಆರ್ ಬಿ ವಕೀಲರು )**

**- ವಿರುದ್ಧ -**

**ಪ್ರತಿವಾದಿಯರುಃ** ಮುಶೆಪ್ಪ ರಾಮಪ್ಪ ಕಡಕೋಳ,
ವಯಾಃ 79 ವರ್ಷ, ವಾಸಃ ಒಕ್ಕಲುತನ,
ಸಾಃ ಉಪ್ಪಾರಟ್ಟಿ, ತಾಃ ಗೋಕಾಕ ಹಾಗು ಇತರರು.

**(ಪ್ರತಿನಿಧಿಸುವವರು ಪ್ರ.4 ಶ್ರೀ.ಎಂ ಜಿ ಎಸ್ / ಬಿ ಕೆ ಜೆ ವಕೀಲರು ಮತ್ತು ಪ್ರ.7,9,10 ಶ್ರೀ ಎನ್ ಎಸ್ ಜಿ ವಕೀಲರು, ಪ್ರ.6 ಮತ್ತು 8,11 ಶ್ರೀ ಎಂ ಜೆ ಪಿ ವಕೀಲರು)**

**<u>ಮಧ್ಯಂತರ ಅರ್ಜಿ ಸಂಖ್ಯೆ 13 ರ ಮೇಲಿನ ಆದೇಶ</u>**

ಸದರಿ ಮಧ್ಯಂತರ ಅರ್ಜಿ ಸಂಖ್ಯೆ 13ನ್ನು ಅರ್ಜಿದಾರ / ಭಾವಿತ ಪ್ರತಿವಾದಿ 11ರವರು ದಿವಾಣಿ ಪ್ರಕ್ರಿಯಾ ಸಂಹಿತೆಯ ಆದೇಶ 1 ನಿಯಮ 10(2) ಸಹವಾಚಕ ಕಲಂ 151 ರಡಿ ಈ

ಅರ್ಜಿಯನ್ನು ಸಲ್ಲಿಸಿ ತಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸಂಗತಿಗಳ ಆಧಾರದ ಮೇಲಿಂದ ತಮ್ಮನ್ನು ಈ ದಾವೆಯಲ್ಲಿ ಪ್ರತಿವಾದಿ 11 ಎಂದು ನ್ಯಾಯೋಚಿತ ದೃಷ್ಟಿಯಿಂದ ಸೇರಿಸಿಕೊಳ್ಳಲು ಅವಕಾಶಕಲ್ಪಿಸಿಕೊಡಬೇಕು ಎಂದು ಕೋರಿಕೊಂಡು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಸದರಿ ಅರ್ಜಿಗೆ ಪೂರಕವಾಗಿ ಅರ್ಜಿದಾರ /ಭಾವಿತ ಪ್ರತಿವಾದಿ 11ರವರು ತಮ್ಮ ಪ್ರಮಾಣ ಪತ್ರ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ವಾದಿಯು ಈ ದಾವೆಯನ್ನು ದಾವಾ ಸ್ವತ್ತುಗಳ ಕುರಿತು ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಪರಿಹಾರ ಕೋರಿ ದಾವೆ ಸಲ್ಲಿಸಿದ್ದು, ದಾವಾ ಅನುಸೂಚಿ 1 ಮತ್ತು 2ರ ಜಮೀನುಗಳಾದ ರಿ.ಸ.424/26 ಮತ್ತು 424/25 ಇವುಗಳು ಭಾವಿತ ಪ್ರತಿವಾದಿ 11ರ ಜಂಟಿ ಕುಟುಂಬದ ಸ್ವತ್ತುಗಳಾಗಿದ್ದು, ಭಾವಿತ ಪ್ರತಿವಾದಿ 6 ಮತ್ತು 8ರವರು ತನ್ನ ಸಹೋದರರಾಗಿದ್ದು, ಸದರಿ ಭಾವಿತ ಪ್ರತಿವಾದಿ 6 ರಿಂದ 8ರವರು ಮೇಲ್ಮನವಿ ನ್ಯಾಯಾಲಯದಲ್ಲಿ ತಮ್ಮನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಕೊಳ್ಳಲು ಅರ್ಜಿ ಸಲ್ಲಿಸಿದ್ದು ಆ ಸಮಯದಲ್ಲಿ ತನ್ನ ಆರೋಗ್ಯ ಸರಿಯಿಲ್ಲದ ಕಾರಣ ತಾನು ದಾಖಲಾತಿಗಳಿಗೆ ಸಹಿ ಮಾಡಿರುವುದಿಲ್ಲ, ಆದರೂ ಸಹ ಭಾವಿತ ಪ್ರತಿವಾದಿ.6 ರಿಂ 8ರವರು ತಮ್ಮ ಅರ್ಜಿಗೆ ಪೂರಕವಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತನ್ನ ಹೆಸರನ್ನು ಸಹ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತಾರೆ. ಆದರೂ ಸಹ ಈ ದಾವೆಯ ವಾದಿಯರು ಉದ್ದೇಶಪೂರ್ವಕವಾಗಿ ತನ್ನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

3. ತನಗೂ ಸಹ ದಾವಾ ಅನುಸೂಚಿ 1 ಮತ್ತು 2 ರ ಸ್ವತ್ತುಗಳಲ್ಲಿ ¼ ಅಂಶ ಹಿಸ್ಸೆ ಇದ್ದು, ಹೀಗಾಗಿ ತನ್ನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು ಈ ದಾವೆಯಲ್ಲಿ ತನ್ನ ಸಹೋದರರಾದ ಪ್ರತಿವಾದಿ 6 ರಿಂದ 8ರವರು ಮಧ್ಯಂತರ ಅರ್ಜಿ ಸಂಖ್ಯೆ 12 ನ್ನು ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ತನ್ನ ಹೆಸರನ್ನು ತಿಳಿಸಿರುವುದಿಲ್ಲ. ದಾವಾ ಅನುಸೂಚಿ 1 ಮತ್ತು 2 ರ ಸ್ವತ್ತುಗಳ ಪಹಣಿ ಪತ್ರಿಕೆಯಲ್ಲಿ ತನ್ನ ಹೆಸರು ಜಂಟಿಯಾಗಿ ದಾಖಲಾಗಿರುತ್ತದೆ. ಹೀಗಾಗಿ ನ್ಯಾಯೋಚಿತ ದೃಷ್ಟಿಯಿಂದ ಈ ದಾವೆಯ ವಿಲೇವಾರಿಗೆ ತಾನು ಅವಶ್ಯ ಪಕ್ಷಗಾರನಾಗಿರುತ್ತೇನೆ. ಒಂದು ವೇಳೆ ಈ

ಅರ್ಜಿಯನ್ನು ಪುರಸ್ಕಾರ ಮಾಡದೆ ಹೋದ ಪಕ್ಷದಲ್ಲಿ ತನಗೆ ತುಂಬಲಾರದ ನಷ್ಟ ವ ಹಾನಿ ಉಂಟಾಗುತ್ತದೆ. ಅರ್ಜಿಯನ್ನು ಪುರಸ್ಕರಿಸಿರುವುದರಿಂದ ವಾದಿಯರಿಗೆ ಯಾವುದೇ ತೊಂದರೆ ವ ಹಾನಿ ಉಂಟಾಗುವುದಿಲ್ಲ. ಹೀಗಾಗಿ ತಾವು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 13ನ್ನು ನ್ಯಾಯೋಚಿತ ದೃಷ್ಟಿಯಿಂದ ಪುರಸ್ಕಾರ ಮಾಡಬೇಕು ಎಂದು ಕೋರಿಕೊಂಡಿರುತ್ತಾರೆ.

3. ಸದರಿ ಮಧ್ಯಂತರ ಅರ್ಜಿಗೆ ವಾದಿಯರ ಪರ ವಕೀಲರು ತಮ್ಮ ತಕರಾರು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ ಅರ್ಜಿದಾರ /ಭಾವಿತ ಪ್ರತಿವಾದಿ 11ರವರು ಸಲ್ಲಿಸಿರುವ ಈ ಅರ್ಜಿಯು ಕಾನೂನಿನಡಿಯಲ್ಲಾಗಲೀ, ವಸ್ತುವಿಷಯದಡಿಯಲ್ಲಾಗಲೀ, ಊರ್ಜಿತವಾಗಿರುವುದಿಲ್ಲ. ಈ ದಾವೆಯ ಅರ್ಜಿದಾರ / ಭಾವಿತ ಪ್ರತಿವಾದಿ 11ರವರು ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಕಾರಣಗಳನ್ನು ನೀಡಿರುವುದಿಲ್ಲ. ದಾವಾ ಅನುಸೂಚಿ 1 ಮತ್ತು 2 ರ ಸ್ವತ್ತುಗಳಲ್ಲಿ ತನ್ನ ಹಿಸ್ಸೆ ಇರುತ್ತದೆ ಎಂದು ಅರ್ಜಿದಾರರು ತಿಳಿಸಿರುವ ಸಂಗತಿ ನಿಜವಾಗಿರುವುದಿಲ್ಲ. ಮಾನ್ಯಗೌರವಾನ್ವಿತ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯದಲ್ಲಿನ ಆರ್ ಎ ನಂ.8022/2023ರಲ್ಲಿ ಭಾವಿತ ಪ್ರತಿವಾದಿ 11ರವರನ್ನು ಪಕ್ಷಗಾರರನ್ನಾಗಿ ಸೇರಿಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ತಮ್ಮ ತೀರ್ಪಿನಲ್ಲಿ ತಿಳಿಸಿರುವುದಿಲ್ಲ. ಹೀಗಾಗಿ ಅರ್ಜಿದಾರರು ಸಲ್ಲಿಸಿರುವ ಈ ಅರ್ಜಿ ಊರ್ಜಿತವಾಗಿರುವುದಿಲ್ಲ. ಆದುದರಿಂದ ಅರ್ಜಿದಾರರು ಸಲ್ಲಿಸಿರುವ ಈ ಅರ್ಜಿಯನ್ನು ಖರ್ಚು ಸಮೇತ ವಜಾಗೊಳಿಸಲು ಕೋರಿಕೊಂಡಿರುತ್ತಾರೆ.

**4.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು. ಹೀಗಾಗಿ ಈ ಅರ್ಜಿಯ ವಿಲೇವಾರಿಗೆ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಗಮನಕ್ಕೆ ಉದ್ಭವವಾಗಿರುತ್ತವೆ.

ಅಂಶ 1. ಅರ್ಜಿದಾರ / ಭಾವಿತ ಪ್ರತಿವಾದಿ 11ರವರು ದಿವಾಣಿ ಪ್ರಕ್ರಿಯಾ ಸಂಹಿತೆಯ ಆದೇಶ 1 ನಿಯಮ 10(2) ಸಹವಾಚಕ ಕಲಂ 151ರಡಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 13ನ್ನು ಪುರಸ್ಕರಿಸಲು ಸಕಾರಣಗಳನ್ನು ನೀಡಿರುತ್ತಾರೆಯೇ ?

ಅಂಶ 2. ಯಾವ ಆದೇಶ ?

**5.** ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸುತ್ತೇನೆ.

ಅಂಶ ನಂ.1 : ಸಕಾರಾತ್ಮಕವಾಗಿ.
ಅಂಶ ನಂ.2: ಅಂತಿಮ ಆದೇಶದಂತೆ ಈ ಕೆಳಕಂಡ.

## ಕಾರಣಗಳು

**6.** **ಅಂಶ ನಂ.1ಕ್ಕೆ:** ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಅಸಲು ದಾವಾ ಸಂಖ್ಯೆ 17/2019ರಲ್ಲಿ ದಿನಾಂಕ 07-01-2009, 23-01-2009ರಂದು ಮಾಡಿಕೊಂಡ ರಾಜಿ ಡಿಕ್ರಿಯು ತಮಗೆ ಬಂಧನಕಾರಕವಾಗಿರುವುದಿಲ್ಲ ಎಂದು ಘೋಷಿಸುವುದಕ್ಕಾಗಿ ಹಾಗೂ ದಾವಾ ಸ್ವತ್ತುಗಳಲ್ಲಿ ತಮಗೆ 1/6 ಅಂಶ ಹಿಸ್ಸೆ ಇದ್ದು ಸದರಿ ಹಿಸ್ಸೆಯ ಕುರಿತು ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧಿನತೆ ಕೋರಿ ಈ ದಾವೆ ಸಲ್ಲಿಸಿರುತ್ತಾರೆ.

**7.** ಈ ದಾವೆಯ ಆದೇಶ ಪುಟಗಳನ್ನು ಗಮನಿಸಿದಾಗ ದಿನಾಂಕ 15-09-2017ರಂದು ವಾದಿಯರು ಸಲ್ಲಿಸಿದ ದಾವೆಯನ್ನು ಈ ನ್ಯಾಯಾಲಯದ ಪೂರ್ವನಿಯೋಜಿತ ಪೀಠಾಸೀನಾಧಿಕಾರಿಗಳು ಡಿಕ್ರಿಗೊಳಿಸಿರುವುದು ಕಂಡು ಬರುತ್ತದೆ. ಅದರಂತೆ ಅಸಲು ದಾವಾ ಸಂಖ್ಯೆ 17/2009ರಲ್ಲಿ ಆದ ರಾಜಿ ಡಿಕ್ರಿಯು ವಾದಿಯರಿಗೆ ಬಂಧನಕಾರಕವಾಗಿರುವುದಿಲ್ಲ ಎಂದು ಘೋಷಣೆ ಮಾಡಿರುವುದು ಕಂಡು ಬರುತ್ತದೆ. ಸದರಿ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಪ್ರತಿವಾದಿಯರು ಮಾನ್ಯ ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಬೆಳಗಾವಿ, ಪೀಠ ಗೋಕಾಕನಲ್ಲಿ ಆರ್ ಎ ನಂ.8022/2023ರಂತೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯನ್ನು ಪುರಸ್ಕಾರ ಮಾಡಿ ಈ ದಾವೆಯ ಭಾವಿತ ಪ್ರತಿವಾದಿ 6 ರಿಂದ 10ರವರು ಸದರಿ ಮೇಲ್ಮನವಿ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 9 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಆದೇಶ 1 ನಿಯಮ 10(2) ಸಹವಾಚಕ ಕಲಂ 151ರಡಿ ಸಲ್ಲಿಸಿದ ಮಧ್ಯಂತರ ಅರ್ಜಿಗಳನ್ನು ಪುರಸ್ಕಾರ ಮಾಡಿ ಪುನಃ ಚೌಕಾಸಿ ಮಾಡುವುದಕ್ಕಾಗಿ ಈ ನ್ಯಾಯಾಲಯಕ್ಕೆ ಮರಳಿ ಕಳುಹಿಸಿರುವುದು ಕಂಡು ಬರುತ್ತದೆ. ಅರ್ಜಿದಾರ / ಭಾವಿತ ಪ್ರತಿವಾದಿ

11ರವರು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 13ನ್ನು ಗಮನಿಸಿದಾಗ ದಾವಾ ಅನುಸೂಚಿ 1 ಮತ್ತು 2 ರ ಸ್ವತ್ತುಗಳಲ್ಲಿ ತನ್ನ ಸಹೋದರರಾದ ಪ್ರತಿವಾದಿ 6 ರಿಂದ 8ರವರ ಜೊತೆಗೆ ತನ್ನ ಹೆಸರು ಸಹ ದಾವಾ ಅನುಸೂಚಿ 1 ಮತ್ತು 2 ರ ಜಮೀನುಗಳ ಪಹಣಿ ಪತ್ರಿಕೆಯಲ್ಲಿ ಜಂಟಿಯಾಗಿ ದಾಖಲಾಗಿದ್ದು, ತನಗೂ ಸಹ ದಾವಾ ಅನುಸೂಚಿ 1 ಮತ್ತು 2 ರ ಸ್ವತ್ತುಗಳಲ್ಲಿ 1/4 ಅಂಶ ಹಿಸ್ಸೆ ಇದ್ದು, ತಾನು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರನಾಗಿರುವುದಾಗಿ ಕೋರಿಕೊಂಡು ಈ ಅರ್ಜಿ ಸಲ್ಲಿಸಿರುವುದು ಕಂಡು ಬರುತ್ತದೆ. ಹೀಗಾಗಿ ಅರ್ಜಿದಾರ / ಭಾವಿತ ಪ್ರತಿವಾದಿ 11ರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಲು ವಾದಿಗೆ ನಿರ್ದೇಶನ ನೀಡದೆ ಇದ್ದರೆ ಭಾವಿತ ಪ್ರತಿವಾದಿ 11ರವರಿಗೆ ತುಂಬಲಾರದ ನಷ್ಟ ವ ಹಾನಿ ಉಂಟಾಗುತ್ತದೆ ಎಂದು ಪರಿಗಣಿಸಿ ಅಂಶ 1ಕ್ಕೆ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

8. **<u>ಅಂಶ 2ಕ್ಕೆ</u>** ಮೇಲಿನ ಅಂಶ 1ಕ್ಕೆ ಸಕಾರಾತ್ಮಕವಾಗಿ ಉತ್ತರಿಸಿರುವುದರಿಂದ ಈ ಕೆಳಕಂಡಂತೆ

**<u>ಆದೇಶ</u>**

ಅರ್ಜಿದಾರ / ಭಾವಿತ ಪ್ರತಿವಾದಿ 11ರವರು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 1 ನಿಯಮ 10(2) ಹಾಗೂ ಸಹವಾಚಕ ಕಲಂ.151ರಡಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 13ನ್ನು ಪುರಸ್ಕರಿಸಲಾಗಿದೆ.

ವಾದಿಯರು ತಮ್ಮ ವಾದಪತ್ರವನ್ನು ತಿದ್ದುಪಡಿ ಮಾಡುವ ಮೂಲಕ ಅರ್ಜಿದಾರರನ್ನು ಪ್ರತಿವಾದಿ 11 ಎಂದು ತಮ್ಮ ವಾದ ಪತ್ರದಲ್ಲಿ ಸೇರಿಸಿಕೊಳ್ಳಲು ನಿರ್ದೇಶಿಸಲಾಗಿದೆ.

ವಾದಪತ್ರವನ್ನು ತಿದ್ದುಪಡಿ ಮಾಡಿ, ತಿದ್ದುಪಡಿ ಮಾಡಿದ ವಾದಪತ್ರ ಸಲ್ಲಿಸಲು ದಿನಾಂಕ 12-03-2025 ರಂದು ಕೊಗಿ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನದಂತೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದನ್ನು ಪರಿಷ್ಕರಿಸಿ, ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ದಿನಾಂಕ 27-02-2025 ರಂದು ಘೋಷಿಸಲಾಗಿದೆ.)

**(ರಾಜೀವ ಗೋಳಸಾರ)**
**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ**
**ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.**